ದಿಃ 21.01.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**<u>ಮುಖ್ಯ ವಿಚಾರಣೆಃ ಶ್ರೀ ಎ.ಎಂ.ಎಂ., ವಕೀಲರಿಂದ ಪ್ರತಿವಾದಿ ಪರವಾಗಿ</u>**

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ನನ್ನ ಕರ್ನಾಟಕ ಬ್ಯಾಂಕ್ ಗೋಣಿಬೀಡು ಶಾಖೆಯ ಬ್ಯಾಂಕ್ ಸ್ಟೇಟ್ಮೆಂಟ್ ಗಳನ್ನು ಹಾಜರು ಮಾಡಿದ್ದು ನಿ.ಡಿ.1 ಮತ್ತು 2 ಎಂದು ಗುರುತಿಸಲಾಯಿತು. ನನ್ನ ಕರ್ನಾಟಕ ಬ್ಯಾಂಕ್ ಮೂಡಿಗೆರೆ ಶಾಖೆಯ ಬ್ಯಾಂಕ್ ಸ್ಟೇಟ್ಮೆಂಟ್ ನ್ನು ಹಾಜರು ಮಾಡಿದ್ದು ನಿ.ಡಿ.3 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ

ದಿಃ 04.02.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎ.ಎಂ.ಎಂ., ವಕೀಲರಿಂದ ಪ್ರತಿವಾದಿ ಪರವಾಗಿ**

3. ಸರ್ವೆ ನಂಬರ್ 134 ಸಂಬಂಧಪಟ್ಟ ಆರ್.ಟಿ.ಸಿ ಯು ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಡಿ.4 ರಿಂದ 9 ಎಂದು ಗುರುತಿಸಲಾಯಿತು, ಎಂ.ಆರ್.ನಂಬರ್ 55/98-99 ರ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಡಿ.10 ಎಂದು ಗುರುತಿಸಲಾಯಿತು, O.S.152/1998 ರ ವಾದ ಪತ್ರದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಡಿ.11 ಎಂದು ಗುರುತಿಸಲಾಯಿತು, O.S.152/1998 ರ ಆದೇಶದ ಪುಟದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಡಿ.12 ಎಂದು ಗುರುತಿಸಲಾಯಿತು, O.S.152/1998 ರಲ್ಲಿ ಸಲ್ಲಿಸಿದ ರಾಜಿ ಅರ್ಜಿಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಡಿ.13 ಎಂದು ಗುರುತಿಸಲಾಯಿತು, ದಿಃ 03.12.2019 ರಂದು ವಾದಿಗಳಿಗೆ ನೀಡಿದ ನೋಟೀಸಿನ ಪ್ರತಿಯನ್ನು ಹಾಜರು ಮಾಡಿದ್ದು ನಿ.ಡಿ.14 ಎಂದು ಗುರುತಿಸಲಾಯಿತು, 5 ಅಂಚೆ ರಸೀದಿಗಳನ್ನು ನಿ.ಪಿ.15 ರಿಂದ 19 ಎಂದು ಗುರುತಿಸಲಾಯಿತು, 1 ನೇ ವಾದಿಗೆ ನೀಡಿದ ನೋಟೀಸು ಜಾರಿಯಾಗದೇ ವಾಪಸ್ಸು ಬಂದಿದ್ದು ಅಂಚೆ ಲಕೋಟೆಯನ್ನು ನಿ.ಡಿ.20 ಎಂದು ಅದರಲ್ಲಿ ಇರುವ ನೋಟೀಸಿನ ಪ್ರತಿಯನ್ನು ನಿ.ಡಿ.20(ಎ) ಎಂದು ಗುರುತಿಸಲಾಯಿತು, 2 ನೇ ವಾದಿಗೆ ನೀಡಿದ ನೋಟೀಸಿನ ಅಂಚೆ ಲಕೋಟೆಯನ್ನು ನಿ.ಡಿ.21 ಎಂದು ಅದರಲ್ಲಿ ಇರುವ ನೋಟೀಸಿನ ಪ್ರತಿಯನ್ನು ನಿ.ಡಿ.21(ಎ) ಎಂದು ಗುರುತಿಸಲಾಯಿತು, 3 ನೇ ವಾದಿಗೆ ನೀಡಿದ ನೋಟೀಸಿನ ಅಂಚೆ ಲಕೋಟೆಯನ್ನು ನಿ.ಡಿ.22 ಎಂದು ಅದರಲ್ಲಿ ಇರುವ ನೋಟೀಸಿನ ಪ್ರತಿಯನ್ನು ನಿ.ಡಿ.22(ಎ) ಎಂದು ಗುರುತಿಸಲಾಯಿತು, 4 ನೇ ವಾದಿಗೆ ನೀಡಿದ ನೋಟೀಸಿನ ಅಂಚೆ ಲಕೋಟೆಯನ್ನು ನಿ.ಡಿ.23 ಎಂದು ಅದರಲ್ಲಿ ಇರುವ

ನೋಟೀಸಿನ ಪ್ರತಿಯನ್ನು ನಿ.ಡಿ.23(ಎ) ಎಂದು ಗುರುತಿಸಲಾಯಿತು, 5 ನೇ ವಾದಿಗೆ ನೋಟೀಸು ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿಯನ್ನು ಹಾಜರು ಮಾಡಿದ್ದು ನಿ.ಡಿ.24 ಎಂದು ಗುರುತಿಸಲಾಯಿತು, ದಿಃ 02.01.2020 ರಂದು ವಾದಿಯು ನೀಡಿದ ಉತ್ತರ ನಿ.ಡಿ.25 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಶ್ರೀ ಬಿ.ಡಿ.ಎಲ್.ಡಿ., ವಕೀಲರಿಂದ ವಾದಿ ಪರವಾಗಿ</u>**

4. ವಕೀರು ಗೈರು ಹಾಜರು, ಪಾಟೀ ಸವಾಲಿಗೆ ಕಾಲವಕಾಶ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ఓ.హే.కే.స.ఇ.ఎ.ఒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ

ದಿಃ 15.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಪಾಟೀ ಸವಾಲು ಶ್ರೀ ಬಿ.ಡಿ.ಎಲ್.ಜಿ., ವಕೀಲರಿಂದ ವಾದಿ ಪರವಾಗಿ**

5. ನನ್ನ ತಾಥನ ಹೆಸರು ಜ್ಯೋಗಿ ದೇವಯ್ಯ ಆಗಿರುತ್ತದೆ. ನಾನು ರುದ್ರಯ್ಯ ರವರು ಮಗನಾಗಿರುತ್ತೇನೆ ಎಂದರೆ ಸರಿ. 1 ನೇ ಪ್ರತಿವಾದಿಯು ನನ್ನ ತಾಯಿಯಾಗಿರುತ್ತಾರೆ. ಕರಿಯಪ್ಪ ಎಂದರೆ ಜ್ಯೋಗಿ ದೇವಯ್ಯ ರವರ ಮಗನಾಗಿರುತ್ತಾರೆ. ಕರಿಯಪ್ಪ ರವರಿಗೆ ಸೋಮಯ್ಯ ಮತ್ತು ಕೆಂಚಮ್ಮ ಎನ್ನುವ ಇಬ್ಬರು ಮಕ್ಕಳು ಇರುತ್ತಾರೆ ಎಂದರೆ ಸರಿ. ಕೆಂಚಮ್ಮ ನವರ ಒಬ್ಬಳೇ ಮಗಳು ವೇದಾವತಿ ಎಂದರೆ ಸರಿ. 3 ರಿಂದ 4 ನೇ ವಾದಿಗಳು 1 ನೇ ವಾದಿಯ ಮಕ್ಕಳು ಎಂದರೆ ಸರಿ. 2 ರಿಂದ 5 ನೇ ಪ್ರತಿವಾದಿಗಳು 1 ನೇ ಪ್ರತಿವಾದಿಯ ಮಕ್ಕಳು ಎಂದರೆ ಸರಿ. 1 ನೇ ಪ್ರತಿವಾದಿಯ ಅಣ್ಣ ಸೋಮಯ್ಯ ರವರಿಗೆ ಮದುವೆಯಾಗಿರಲಿಲ್ಲ ಎಂದರೆ ಸರಿ. ದಾವ ಆಸ್ತಿಯು ಜೋಗಯ್ಯ ರವರಿಂದ ನಮ್ಮ ಒಟ್ಟು ಕುಟುಂಬಕ್ಕೆ ಬಂದಿರುತ್ತದೆ ಎಂದರೆ ಸರಿ. ದಾವ ಆಸ್ತಿಗಳು ವಿಭಾಗ ಆಗಿರುವ ಬಗ್ಗೆ ದಾಖಲಾತಿ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಮೌಖಿಕವಾಗಿ ವಿಭಾಗ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಭಾಗದ ಬಗ್ಗೆ ಕಂದಾಯ ಇಲಾಖೆಗೆ ಯಾವುದೇ ದಾಖಲಾತಿಯನ್ನು ನೀಡಿರುವುದಿಲ್ಲ. ವಾದಿ ಮತ್ತು 1 ನೇ ವಾದಿಯ ಅಣ್ಣ ಸೋಮಯ್ಯ ರವರ ವಿರುದ್ದ ನಾನು ಈ ಹಿಂದೆ ಯಾವುದೇ ದಾವೆಯನ್ನು ದಾಖಲು ಮಾಡಿರುವುದಿಲ್ಲ. ದಾವ ಆಸ್ತಿಗೆ ಸಂಬಂಧಪಟ್ಟಂತೆ ನಾನು ಯಾವುದೇ ಕೇವಿಯಟ್ ಹಾಕಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಲು ನಾನೇ ನನ್ನ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ. ಜಿ. ಹೊಸಹಳ್ಳಿ ಸರ್ವೆ ನಂಬರ್ 134 ರಲ್ಲಿ 10 ಎಕರೆ ಮತ್ತು ಸರ್ವೆ ನಂಬರ್ 189/2 ರಲ್ಲಿ 1 ಎಕರೆ 25 ಗುಂಟೆ ಆಸ್ತಿಯು ನಮ್ಮ ಕುಟುಂಬಕ್ಕೆ ಸೇರಿರುತ್ತದೆ ಎನ್ನುವ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರು ಮಾಡಿರುತ್ತೇನೆ. ಸದರಿ ಆಸ್ತಿಗಳು ಸೋಮಯ್ಯ ರವರ ಹೆಸರಿನಲ್ಲಿ ಇತ್ತು ಎಂದು

ನಾನು ದಾಖಲೆಯನ್ನು ಹಾಜರು ಮಾಡಿರುತ್ತೇನೆ. ನಿ.ಡಿ.4 ಪಹಣಿ ಪತ್ರವು ಸೋಮಯ್ಯ ಬಿನ್ ದ್ಯಾವಯ್ಯ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಅವರನ್ನು ಸೋಮಯ್ಯ ಬಿನ್ ದ್ಯಾವಯ್ಯ ಎಂದೇ ಕರೆಯುತ್ತಿದ್ದರು. ಸೋಮಯ್ಯ ರವರು ದೇವಯ್ಯ ರವರ ಮಗನಾಗಿರುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುವ ಸೋಮಯ್ಯ ರವರ ವೀಲು ನಾಮೆಯಲ್ಲಿ ಅವರ ತಂದೆಯ ಹೆಸರು ದಿಃ ಕರಿಯಪ್ಪ ಎಂದು ನಮೂದು ಇರುತ್ತದೆ ಎಂದರೆ ಸರಿ. ಸೋಮಯ್ಯ ರವರು ತನ್ನ ಸಹಿಯನ್ನು ಹೆಚ್.ಕೆ. ಸೋಮಯ್ಯ ಎಂದು ಕನ್ನಡದಲ್ಲಿ ಬರೆಯುತ್ತಿದ್ದರು.

6. ನಿಡಿ.11 ರಲ್ಲಿ ಸೋಮಯ್ಯ ರವರ ತಂದೆಯ ಹೆಸರು ಜ್ಯೋಗಿ ದೇವಯ್ಯ ಎಂದು ನಮೂದು ಇರುತ್ತದೆ ಎಂದರೆ ಸರಿ. ನಿ.ಡಿ11 ರಲ್ಲಿ ಇರುವ ಸಹಿಗೂ ನಾನು ನ್ಯಾಯಾಲಯದಲ್ಲಿ ಹಾಜರು ಮಾಡಿರುವ ಸೋಮಯ್ಯ ರವರ ವೀಲು ನಾಮೆಯಲ್ಲಿ ಇರುವ ಸಹಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಿಡಿ.11 ರಲ್ಲಿ ಕೇವಲ ಸೋಮಯ್ಯ ಎಂದು ಮಾತ್ರ ಸಹಿ ಇರುತ್ತದೆ ಎಂದರೆ ಸರಿ. ಸರ್ವೆ ನಂಬರ್ 106/2 ರಲ್ಲಿ 6 ಎಕರೆ 24 ಗುಂಟೆ ಆಸ್ತಿ ಮತ್ತು ಸರ್ವೆ ನಂಬರ್ 189/1 ರಲ್ಲಿ 1 ಎಕರೆ 29 ಗುಂಟೆ ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಆಗಿರುವುದರಿಂದ ನಾನು ದಾಖಲೆಗಳನ್ನು ಸೃಷ್ಟಿ ಮಾಡಿ ಖಾತಾ ಬದಲಾವಣೆ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಒಟ್ಟು ಕುಟುಂಬದ ಆಸ್ತಿಯು ಪಾವತಿಯಾದ ಕಾರಣ ಖಾತಾ ಬದಲಾಣೆ ಆಗಿರುತ್ತದೆ ಎಂದು ನುಡಿಯುತ್ತಾರೆ. ನಕಲಿ ವೀಲು ಆಧಾರದ ಮೇಲೆ ಸರ್ವೆ ನಂಬರ್ 189/1 ರಲ್ಲಿ 1 ಎಕರೆ 29 ಗುಂಟೆ ಆಸ್ತಿಯನ್ನು ನನ್ನ ಹೆಸರಿಗೆ ಖಾತಾ ಬದಲಾವಣೆ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಹೌದು ನನ್ನ ಹೆಸರಿಗೆ ಖಾತಾ ಬದಲಾವಣೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸೋಮಯ್ಯ ಬಿನ್ ಕರಿಯಪ್ಪ ರವರು ನನಗಾಗಲಿ ನನ್ನ ಕುಟುಂಬಕ್ಕಾಗಲಿ ಆಸ್ತಿಯನ್ನು ಯಾವುದೇ ದಾಖಲೆ ಮೂಲಕ ನೀಡಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ

ತಂದೆಯಿಂದ ನನಗೆ ಆಸ್ತಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸೋಮಯ್ಯ ಬಿನ್ ಕರಿಯಪ್ಪ ರವರು ನನ್ನ ಕುಟುಂಬದವರು ಎಂದರೆ ಸರಿ. ಸೋಮಯ್ಯ ಬಿನ್ ದ್ಯಾವಯ್ಯ ಮತ್ತು ಸೋಮಯ್ಯ ಬಿನ್ ಜ್ಯೋಗಿ ದೇವಯ್ಯ ಯಾವುದೇ ವ್ಯಕ್ತಿಯು ನನ್ನ ಕುಟುಂಬದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಸೋಮಯ್ಯ ಬಿನ್ ದೇವಯ್ಯ ಮತ್ತು ಸೋಮಯ್ಯ ಬಿನ್ ಜ್ಯೋಗಿ ದೇವಯ್ಯ ಎನ್ನುವ ವ್ಯಕ್ತಿ ನಮ್ಮ ಕುಟುಂಬಂದಲ್ಲಿ ಇದ್ದರು ಎನ್ನುವ ಬಗ್ಗೆ ನಾನು ಆಸ್ತಿಯ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ಸೋಮಯ್ಯ ಬಿನ್ ದೇವಯ್ಯ ಮತ್ತು ಸೋಮಯ್ಯ ಬಿನ್ ಜ್ಯೋಗಿ ದೇವಯ್ಯ ಎನ್ನುವವರು ಯಾವುದೇ ಪಡಿತರ ಚೀಟಿಯನ್ನು ಮಾಡಿಕೊಂಡಿರುವುದಿಲ್ಲ. ಸರ್ವೆ ನಂಬರ್ 134 ರಲ್ಲಿ 10 ಎಕರೆ ಮತ್ತು ಸರ್ವೆ ನಂಬರ್ 189/2 ರಲ್ಲಿ 1 ಎಕರೆ 25 ಗುಂಟೆ ಆಸ್ತಿಯು ನಮ್ಮ ಕುಟುಂಬಕ್ಕೆ ಸೇರಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯು ಒಟ್ಟು ಕುಟುಂಬಕ್ಕೆ ಸೇರಿತ್ತು ಎನ್ನುವ ಬಗ್ಗೆ ದಾಖಲೆಯನ್ನು ಹಾಜರು ಮಾಡಲು ತೊಂದರೆ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಆಸ್ತಿಗಳು ಬಾಯಿ ಮಾತಿನಲ್ಲಿ ವಿಭಾಗ ಆಗಿರುತ್ತದೆ ಎಂದು ನುಡಿಯುತ್ತಾರೆ. ಸೋಮಯ್ಯ ಬಿನ್ ಕರಿಯಪ್ಪ ರವರಿಗೆ ಯಾವುದೇ ವಿಧ್ಯಾಭ್ಯಾಸ ಇರಲಿಲ್ಲ. ಸೋಮಯ್ಯ ಬಿನ್ ಕರಿಯಪ್ಪ, ಸೋಮಯ್ಯ ಬಿನ್ ದೇವಯ್ಯ ಮತ್ತು ಸೋಮಯ್ಯ ಬಿನ್ ಜ್ಯೋಗಿ ದೇವಯ್ಯ ಎಂಬ ವ್ಯಕ್ತಿಗಳು ಒಂದೇ ವ್ಯಕ್ತಿಗೆ ಸೇರಿದ ಹೆಸರು ಎಂದು ತೋರಿಸಲು ನನ್ನ ಬಳಿ ಬೇರೆ ದಾಖಲಾತಿ ಇರುವುದಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ದಿಃ 09.11.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಮುಂದುವರೆದ ಪಾಟೀ ಸವಾಲು ಶ್ರೀ ಬಿ.ಡಿ.ಎಲ್.ಜಿ., ವಕೀಲರಿಂದ ವಾದಿ ಪರವಾಗಿ**

7. 2017 ರಲ್ಲಿ ನಾನು ವಾದಿಯ ವಿರುದ್ದ ಕೇವಿಯಟ್ ಹಾಕಿದ್ದೆನು ಎಂದರೆ ಸರಿ. ಈಗ ನನಗೆ ತೋರಿಸಿದ ದಾಖಲೆಯು ನಾನು ವಾದಿಯ ವಿರುದ್ದ ದಾಖಲು ಮಾಡಿರುವ ಕೇವಿಯಟ್ ನ ಪ್ರತಿ ಎಂದು ಸಾಕ್ಷಿಯು ಒಪ್ಪಿಕೊಂಡ ಕಾರಣ ನಿ.ಪಿ.11 ಎಂದು ಗುರುತಿಸಲಾಯಿತು. O.S.No.152/1998 ರಂತೆ ದಾವೆಯನ್ನು ಸೋಮಯ್ಯ ಬಿನ್ ಜೋಗಿ ದೇವಯ್ಯ ರವರು ದಾಖಲು ಮಾಡಿರುತ್ತಾರೆ ಎಂದರೆ ಸರಿ. ನಿ.ಪಿ.11 ರಲ್ಲಿ ಸೋಮಯ್ಯ ಬಿನ್ ಕರಿಯಪ್ಪ ಎಂದು ಎಲ್ಲಿಯು ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಸೋಮಯ್ಯ ಬಿನ್ ಕರಿಯಪ್ಪ ಎಂದು ಅವರನ್ನು ಕರೆಯುತ್ತಿದ್ದರು ಎಂದು ನುಡಿಯುತ್ತಾರೆ. ಸೋಮಯ್ಯ ಬಿನ್ ಕರಿಯಪ್ಪ  ಎಂದರೆ ಈ ದಾವೆಯ 1 ನೇ ವಾದಿಯ ಅಣ್ಣ ಎಂದರೆ ಸರಿ. ನನ್ನ ತಂದೆಯ ಹೆಸರು ರುದ್ರಯ್ಯ ಎಂದರೆ ಸರಿ. ಸಾಕ್ಷಿಯು ಮುಂದುವರೆದು ರುದ್ರಯ್ಯ ರವರ ತಂದೆಯ ಹೆಸರು ಕೆಂಚಯ್ಯ ಎಂದು ನುಡಿಯುತ್ತಾರೆ.  O.S.No.152/1998 ರ ಸ್ವತ್ತು ಸೋಮಯ್ಯ ಬಿನ್ ಜ್ಯೋಗಿ ದೇವಯ್ಯ ರವರಿಗೆ ಹೇಗೆ ಬಂದಿರುತ್ತದೆ ಎಂದು ನಾನು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರು ಮಾಡಿರುತ್ತೇನೆ. ಸರ್ವೆ ನಂಬರ್ 134 ಜಿ. ಹೊಸಳ್ಳಿ ಗ್ರಾಮದ 10 ಎಕರೆ ಜಮೀನು ನನ್ನ ಕುಟುಂಬಕ್ಕೆ ಯಾವತ್ತೂ ಮಂಜೂರಾಗಿರಲಿಲ್ಲ ಮತ್ತು ಸ್ವಾಧೀನ ಇರಲಿಲ್ಲ ಎಂದರೆ ಸರಿಯಲ್ಲ. O.S.No.152/1998 ರಲ್ಲಿ ಇರುವ ಆಸ್ತಿಗೂ ದಾವ ಆಸ್ತಿಗೂ ಒಂದಕ್ಕೊಂದು ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. O.S.No.152/1998 ರಲ್ಲಿ ಇರುವ ಆಸ್ತಿಯು ನನ್ನ ಕುಟುಂಬಕ್ಕೆ ಸೇರಿತ್ತು ಎಂದು ತೋರಿಸುವ ಬಗ್ಗೆ

ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ 134 ಜಿ. ಹೊಸಳ್ಳಿ ಗ್ರಾಮದಲ್ಲಿ 10 ಎಕರೆ ಜಮೀನು ಸೋಮಯ್ಯ ಬಿನ್ ಕರಿಯಪ್ಪ ರವರಿಗೆ ಮಂಜೂರಾಗಿತ್ತು ಎನ್ನುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರು ಮಾಡಿರುತ್ತೇನೆ. ವಾದಿಗೆ ಆಸ್ತಿಯಲ್ಲಿ ಭಾಗ ನೀಡಿದ ಬಗ್ಗೆ ದಾಖಲೆಯನ್ನು ಹಾಜರು ಮಾಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ವಿಭಾಗವು ಮೌಖಿಕ ವಿಭಾಗ ಆಗಿರುವುದರಿಂದ ಯಾವುದೇ ದಾಖಲೆಯನ್ನು ಹಾಜರು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಕಲಿ ದಾಖಲೆಯನ್ನು ನೀಡಿ ನಾನು ದಾವ ಆಸ್ತಿಯ ಖಾತೆಯನ್ನು ನನ್ನ ಹೆಸರಿಗೆ ಬದಲಾವಣೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವ ಆಸ್ತಿಯ ಖಾತೆಯು ನಿಮ್ಮ ಹೆಸರಿನಲ್ಲಿ ದಾಖಲು ಮಾಡುವ ಸಮಯದಲ್ಲಿ ವಾದಿಗಳ ಸಹಿಯನ್ನು ಪಡೆದುಕೊಂಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ದಾವ ಆಸ್ತಿಯು ಪೌತಿ ಆಧಾರದ ಮೇಲೆ ನನ್ನ ಹೆಸರಿಗೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಪೌತಿ ಆಧಾರದ ಮೇಲೆ ಖಾತಾ ಬದಲಾವಣೆಯಾಗಿರುತ್ತದೆ ಎಂದು ಈಗ ಹೇಳುತ್ತಿದ್ದೀರಿ ಆದರೆ ನಕಲಿ ವೀಲು ನಾಮೆಯನ್ನು ಹಾಜರು ಮಾಡಿ ಖಾತೆ ಬದಲಾವಣೆ ಮಾಡಿಕೊಂಡಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿಯ ಸೋಮಯ್ಯ ರವರು ಮೃತಪಡುವ ಮೊದಲೇ ವೀಲು ನಾಮೆಯನ್ನು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸೋಮಯ್ಯ ರವರ ವೀಲು ನಾಮೆಯಲ್ಲಿ ಕೆಂಚಮ್ಮ ರವರ ಸಹಿ ಇರುತ್ತದೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಕೆಂಚಮ್ಮ ರವರ ಕುಟುಂಬಕ್ಕೆ ಆಸ್ತಿಯಲ್ಲಿ ಪಾಲು ನೀಡಿದ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೆನೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

8. ಹಿಂದಿನಿಂದಲು ದಾವ ಆಸ್ತಿಯು ಪ್ರತಿವಾದಿಗಳ ಸ್ವಾಧೀನ ಇರುತ್ತದೆ ಎಂದರೆ ಸರಿ. ದಾವ ಆಸ್ತಿಯ ಉತ್ಪತ್ತಿಯನ್ನು ನನ್ನ ಹೆಸರಿಗೆ ಖಾತಾ ಬದಲಾವಣೆಯಾದ ದಿನದಿಂದ ನಾನೇ ಪಡೆದುಕೊಳ್ಳುತ್ತಿದ್ದೇನೆ ಎಂದರೆ ಸರಿ. ದಾವ ಆಸ್ತಿಯಲ್ಲಿ

ಪಡೆದುಕೊಳ್ಳುತ್ತಿದ್ದ ಉತ್ಪತ್ತಿಯ ಬಾಬ್ತು ನಾನು ವಾದಿಗಳಿಗೆ ಹಣ ನೀಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಗಳಿಗೆ ದಾವ ಆಸ್ತಿಯಲ್ಲಿ ಭಾಗ ಕೊಡಬೇಕಾಗುತ್ತದೆ ಎನ್ನುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕುಟುಂಬದ ಆಸ್ತಿಯಲ್ಲಿ ವಾದಿಗಳಿಗೆ ಯಾವುದೇ ಪಾಲನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಡಿ.14 ರಿಂದ 21(ಎ) ದಾಖಲೆಗಳಿಗೂ ವಾದಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ